ಹೇತ್ತೇರಿಕೇ...

ಯಾತಕ್ಕಾದರೋ ಕೇಳಿದೆನೋ ಎಂದು ನನಗೆ ನಾನೇ ಪರಿತಪಿಸುತ್ತಿರುವ ನಡುವೆಯೇ, ಕರ್ನಲ್ ಚಾರಿ, 'ಚಲೋ, ನಾನಿನ್ನು ಹೊರಡುತೀನಿ – ಶಕ್ತೀ... ಬೆಳಬೆಳಿಗ್ಗೆ ಬಂದಿದ್ದು.' ಎಂದು ಹೇಳಿ, ಮುಸುಡಿಯ ಮಾಸ್ಕನ್ನು ಮತ್ತೊಮ್ಮೆ ಕೆಳಸರಿಸುತ್ತಲೇ ಒಂದಡಿಯಷ್ಟು ಮುಂದೆಬಂದು, 'ನನ್ನನ್ನ ಚೆನ್ನಾಗಿ ನೋಡಿ ನೆನಪಿಟ್ಟುಕೊಳ್ಳಿ. ಈ ಹಾಳು ಮಾಸ್ಕಿನ ದೆಸೆಯಿಂದ ಯಾರು ಯಾರೂಂತಲೇ ಗೊತ್ತಾಗಲ್ಲ...' ಎಂದು ನಗುತ್ತಲೇ ಹೇಳಿ, ಮಾಸ್ಕನ್ನು ಮತ್ತೊಮ್ಮೆ ಮೂಗಿನವರೆಗೂ ಏರಗೊಟ್ಟು, 'ರೈಟ್ ಸೀಯೂ...' ಅನ್ನುತ್ತ ಕದಲಿ, ಒಂದೆರಡು ಅಡಿಬೆಳೆಸಿ ಹೊರಟಿದ್ದವನು – ಏನೋ ನೆನಪಾದವನಂತೆ ಒಮ್ಮಿಂದೊಮ್ಮೆ ಜಡಿದುನಿಂತು, 'ಐ ಮೆಟ್ ಯುವರ್ ವೈಫ್ ಟೂ...' ಎಂದು ಹೇಳಿಬಿಟ್ಟ.

ನನಗೋ, ಎದೆ ಧಸಕ್ಕಂದುಹೋಯಿತು. 'ವ್ಹ್... ವೇರ್?' ಎಂದು ಪೆಕರುಪೆಕರಾಗಿ ಕೇಳಿದೆ.

'ಜಸ್ಟ್ ನವ್...' ಎಂದು ದೊಡ್ಡದಾಗಿಯೊಮ್ಮೆ ಉಸುರು ಹೊರದಬ್ಬಿ ಹೇಳಿದ. 'ಆದರೆ, ಆಕೆಗೆ ನಾನು ಯಾರೂಂತ ಗೊತ್ತಾಗಲಿಲ್ಲ.'

'...?!'

ನಾನು ಆಶ್ಚರ್ಯದ ಅತಿರೇಕದೊಳಗೆ ಚಡಪಡಿಸುವಾಗ, ಕರ್ನಲ್ ಚಾರಿ, ನೇರ ನನ್ನತ್ತಲೇ ಒಮ್ಮೆ ದೀರ್ಘವಾಗಿ ನೋಡಿ, 'ಆಕೆಗೆ ನಾನು ಯಾರೂಂತ ಹೇಳಿ – ಶಕ್ತೀ... ಡಿಟೇಲಾಗಿ ಹೇಳಿ. ಬರುತೀನಿ...' ಅಂತಲೂ ಹೇಳಿ ಸರಿದುಹೋದ.

ಈವಾಗಲಂತೂ ಪೀಕಲಾಟವೇ ಮೊದಲಾಯಿತು. ಅವನ 'ಮ್ಯಾಚಿಂಗ್–ಮ್ಯಾಚಿಂಗ್' ಆದ ಕಡುಗೇಸರೀ ಮಾಸ್ಕುಪ್ಯಾಂಟುಗಳ ಬಗ್ಗೆ ಕಾಂಪ್ಲಿಮೆಂಟು ಹೇಳಬೇಕೆಂದುಕೊಂಡ ಮಾತು ಗಂಟಲೊಳಗೇ ಮಿಕ್ಕು ಹೂತುಕೊಂಡಿತು.

ಅಲ್ಲಾ... ಗೊತ್ತುಗುರಿಯಿರಲಿ, ಸರಿಯಾಗಿ ಯಾರಂತಲೇ ಗುರುತಿರದ ಮನುಷ್ಯನೊಬ್ಬ – ಹೀಗೆ, ಅನಾಮತ್ತನೆ ಎದುರಾಗಿ, 'ನಿನ್ನ ಹೆಂಡತಿ ನನ್ನನ್ನು ಗುರುತಿಸಲಿಲ್ಲ. ಅವಳಿಗೆ ತಿಳಿಹೇಳು...' ಎಂದು ಹೇಳಿ, ಎದುರಾದಷ್ಟೇ ಸಲೀಸಾಗಿ ಎದುರಿನಿಂದ ಕಳಚಿಕೊಂಡು ಹೊರಟರೆ ಏನು ತಾನೇ ಮಾಡುವುದು? ಅವನನ್ನು ತಡೆದು, 'ಕರ್ನಲ್ ಚಾರೀ, ನಾನೂ ನಿನ್ನಂತೆಯೇ ವಿಚ್ಛೇದಿತ ಕಣಯ್ಯ... ಒಂದಲ್ಲ ಎರಡಲ್ಲಾಂತ ಮೂರು ಮುರುಕು–ಮದುವೆಗಳ ಸರದಾರ, ನಾನು. ಈಗ ಹೇಳು. ನನ್ನ ಯಾವ ಹೆಂಡತಿಯನ್ನು ನೀನು ಕಂಡಿದ್ದು?' ಅನ್ನಲಾದೀತೇ? ನನ್ನನ್ನು ತೊರೆದುಹೊರಟ ಮೂವರು ಹೆಂಡಿರಲ್ಲಿ, 'ನಿಖರ'ವಾಗಿ ಯಾರನ್ನು ಕಂಡೆ ಹೇಳೂ... ಎಂದು ಸ್ಪಷ್ಟೀಕರಣ ಕೇಳಲಾದೀತೆ? ಅಥವಾ, ಅವನು ನಿಜಕ್ಕೂ ನನ್ನ ಮೂವರಲ್ಲೊಬ್ಬರನ್ನು ಕಣ್ಣಾರೆ ಕಂಡಿದ್ದುಂಟೇ? ದೇವರೇ... ಇದಕ್ಕಿಂತ ವಿಚಿತ್ರ ಸಂಗತಿಯುಂಟೇ? ಹೋಗಲಿ. ನನಗೆ ಈ ಮೂವರಲ್ಲಿ ಯಾರೊಬ್ಬಳನ್ನಾದರೂ ಮರಳಿ ಕಾಣಸಿಗುವ ಯೋಗವಿದ್ದಲ್ಲಿ, ಅಕಸ್ಮಾತ್ ಅದು ಅದೃಷ್ಟವೇ ಆಗಿದ್ದಲ್ಲಿ – ಅದಕ್ಕೊಂದು ಹೊತ್ತುಗೊತ್ತು ಬೇಡವೇ? ವ್ಯಾಕ್ಸಿನೇಶನಿನ ಸರತಿ ಕಾಯುತ್ತಿರುವ ಆಸ್ಪತ್ರೆಯ ಸಮ್ಮುಖದಲ್ಲಿ ಹೀಗೊಂದು ವಿಚಿತ್ರ ಸನ್ನಿವೇಶವುಂಟಾಗಬೇಕೇ?

ತುತ್ಥ್...

ನಿಂತಲ್ಲಿಯೇ ಉಳಿದು 'ವೆಲ್ನೆಸ್ ಕೇರ್'ನ ವಿಶಾಲವಾದ ಲೌಂಜಿನುದ್ದಕ್ಕೂ ಕಣ್ಣಾಡಿಸಿದೆ. ಸರಿಸುಮಾರು ಇಪ್ಪತ್ತಿಪ್ಪತ್ತೈದು ಜನರಷ್ಟೇ ಎದುರಿಗಿದ್ದರು. ಸಾಲದ್ದಕ್ಕೆ ಎಲ್ಲರೂ ಒಂದೇ 'ರೀತಿ'ಯಾಗಿ ಕಂಡುತೋರಿದರು. ಗಂಡುಹೆಣ್ಣೆಂಬ ನಿಜಭೇದವಿಲ್ಲದೆಯೇ ಎಲ್ಲರೂ ಒಂದೇ ತೆರನಾಗಿ ಉಡುತೊಡುವ ಈ ಇಪ್ಪತ್ತೊಂದನೇ ಶತಮಾನದ ಯೂನೀಸೆಕ್ಸ್ ಸಂಪ್ರದಾಯದ ಮೇಲೆ